**GOVERNMENT OF KARNATAKA**
**FOOD SAFETY & DRUG ADMINISTRATION**
**BOARD OF EXAMINING AUTHORITY (D.PHARMACY)**
**ಪರೀಕ್ಷಾ ಪ್ರಾಧಿಕಾರ ಮಂಡಳಿ (ಡಿ.ಫಾರ್ಮ), ಬೆಂಗಳೂರು**
**C/o Government College of Pharmacy, No. 2, 3rd Floor, P Kalingarao Road, Subbaiah Circle, Bangalore-27**
email: bea.dcd-ka@nic.in, beadpharmacy@yahoo.com Phone : 080- 22483465, 080- 22223466
website: www.beadpharmacy.org


ಸಂಖ್ಯೆ: ಆಜಿಅ/ಪಪ್ರಾಮಂ/ಪ್ರವೇಶ–ಅನುಮೋದನೆ/2025–26 ದಿನಾಂಕ: 25.06.2026

**ಕಛೇರಿ ಆದೇಶ**

ವಿಷಯ: 2025–26 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಪ್ರಥಮ ಡಿ.ಫಾರ್ಮ ವಿದ್ಯಾರ್ಥಿಗಳ ಪ್ರವೇಶ ಅರ್ಜಿಗಳ ಪರಿಶೀಲನೆ ಹಾಗೂ ತಾತ್ಕಾಲಿಕ ಪ್ರವೇಶ ಅನುಮೋದನಾ ಪ್ರಕ್ರಿಯೆಯ ಕುರಿತು.

* * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025–26 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಡಿ.ಫಾರ್ಮ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶ ಅರ್ಜಿ, ದಾಖಲಾತಿಗಳ ಪರಿಶೀಲನೆ ಹಾಗೂ ತಾತ್ಕಾಲಿಕ ಪ್ರವೇಶ ಅನುಮೋದನಾ ಪ್ರಕ್ರಿಯೆಗಾಗಿ ರಾಜ್ಯದ ಎಲ್ಲಾ ಡಿ.ಫಾರ್ಮಸಿ ವಿದ್ಯಾಸಂಸ್ಥೆಗಳು ಈ ಕೆಳಗೆ ತಿಳಿಸಿದ ದಿನಾಂಕಗಳಂದು ತಪ್ಪದೇ ಬೆಳಗ್ಗೆ 10:30 ಘಂಟೆಗೆ ಪರೀಕ್ಷಾ ಪ್ರಾಧಿಕಾರ ಮಂಡಳಿಯಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ.

| ಕ್ರಮ ಸಂಖ್ಯೆ | ಪ್ರವೇಶ ಅನುಮೋದನಾ ಪ್ರಕ್ರಿಯೆಯು ನಡೆಯುವ ದಿನಾಂಕ ಮತ್ತು ಸಮಯ | | ಕಾಲೇಜ್ ಕೋಡ್‌ಗಳು |
|---|---|---|---|
| 1. | 06.07.2026 | ಬೆಳಿಗ್ಗೆ 10.30 ರಿಂದ | 701 – 735 |
| 2. | 07.07.2026 | ಬೆಳಿಗ್ಗೆ 10.30 ರಿಂದ | 736 – 775 |
| 3. | 08.07.2026 | ಬೆಳಿಗ್ಗೆ 10.30 ರಿಂದ | 801 – 840 |
| 4. | 09.07.2026 | ಬೆಳಿಗ್ಗೆ 10.30 ರಿಂದ | 841 – 880 |
| 5. | 10.07.2026 | ಬೆಳಿಗ್ಗೆ 10.30 ರಿಂದ | 881 – 899 & 901 – 925 |
| 6. | 13.07.2026 | ಬೆಳಿಗ್ಗೆ 10.30 ರಿಂದ | 601 – 640 |
| 7. | 14.07.2026 | ಬೆಳಿಗ್ಗೆ 10.30 ರಿಂದ | 641 – 680 |
| 8. | 15.07.2026 | ಬೆಳಿಗ್ಗೆ 10.30 ರಿಂದ | 681 – 699 & 501 – 520 |
| 9 | 16.07.2026 | ಬೆಳಿಗ್ಗೆ 10.30 ರಿಂದ | 523 – 550 |
| 10 | 17.07.2026 | ಬೆಳಿಗ್ಗೆ 10.30 ರಿಂದ | 551 – 580 |
| 11 | 18.07.2026 | ಬೆಳಿಗ್ಗೆ 10.30 ರಿಂದ | 581 – 599 & 951 – 964 |

2025–26ನೇ ಶೈಕ್ಷಣಿಕ ಸಾಲಿನ Calendar of Events ನಲ್ಲಿ ತಾತ್ಕಾಲಿಕ ಪ್ರವೇಶ ಅನುಮೋದನೆಗೆ ಸಲ್ಲಿಸಬೇಕಾದ ಮಾಹಿತಿಗಳ ಬಗ್ಗೆ ವಿವರವಾಗಿ ತಿಳಿಸಲಾಗಿರುತ್ತದೆ.

. . . . . 2

ಮೇಲೆ ತಿಳಿಸಿದ ದಿನಾಂಕಗಳಂದು ಸಂಬಂಧಿಸಿದ ವಿದ್ಯಾಸಂಸ್ಥೆಯವರು ಮಂಡಳಿಗೆ ಈಗಾಗಲೇ ಸಲ್ಲಿಸಿರುವ ದಾಖಲೆಗಳ ಪರಿಶೀಲನೆ ನಡೆಸಲಾಗುವುದು. ಪ್ರವೇಶ ಅರ್ಜಿಗಳ ಪರಿಶೀಲನೆ ಹಾಗೂ ಪ್ರವೇಶ ಅನುಮೋದನಾ ಪ್ರಕ್ರಿಯೆಯನ್ನು ವಿದ್ಯಾಸಂಸ್ಥೆಗಳ ಸಮ್ಮುಖದಲ್ಲಿಯೇ ನಡೆಸಲಿರುವುದರಿಂದ ನಿಗದಿಪಡಿಸಿದ ದಿನಾಂಕದಂದು ಮೇಲೆ ತಿಳಿಸಿರುವ ವಿದ್ಯಾಸಂಸ್ಥೆಯವರು ಪರೀಕ್ಷಾ ಪ್ರಾಧಿಕಾರ ಮಂಡಳಿಯಲ್ಲಿ ತಪ್ಪದೇ ಹಾಜರಿದ್ದು, ಪರಿಶೀಲನಾ ಸಮಿತಿಯ ಮುಂದೆ ಎಲ್ಲಾ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಈ ಮೂಲಕ ಸೂಚಿಸಲಾಗಿದೆ.

ಅಲ್ಲದೇ, ಸದರಿ ದಿನದಂದು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಲಾಗಿದೆ.

1) ಪ್ರವೇಶ ಶುಲ್ಕ ಪಾವತಿಸಿದ ಚಲನ್‌ನ ಪ್ರತಿಯೊಂದಿಗೆ ಶುಲ್ಕ ಪಾವತಿಯ ವಿವರಗಳು.
2) 2025-26 ನೇ ಶೈಕ್ಷಣಿಕ ಸಾಲಿಗೆ ಭಾರತೀಯ ಫಾರ್ಮಸಿ ಪರಿಷತ್ತು, ನವದೆಹಲಿ (ಪಿ.ಸಿ.ಐ) ನೀಡಿದ ಅನುಮೋದನಾ ಪತ್ರ.
3) ಸರ್ಕಾರದಿಂದ ಪಡೆದ ಅನುಮೋದನೆ ಪತ್ರ (GOK).
4) ***ಪ್ರವೇಶ ಅನುಮೋದನೆ ಪ್ರಕ್ರಿಯೆಗೆ ಕಡ್ಡಾಯವಾಗಿ ವಿದ್ಯಾಸಂಸ್ಥೆಯ ಪ್ರಾಂಶುಪಾಲರು/ಆಡಳಿತಾಧಿಕಾರಿಯವರು (***ADMINISTRATIVE HEAD) Authorization Letter ***ಮತ್ತು ವಿದ್ಯಾಸಂಸ್ಥೆಯ ಅಧಿಕೃತ ಗುರುತಿನ ಚೀಟಿಯೊಂದಿಗೆ*** (College ID Card) ***ಹಾಜರಾಗಲು ಸೂಚಿಸಿದೆ.***

(ಟಿ.ಪಿ.ಸುಜಿತ್)
ಉಪ ಔಷಧ ನಿಯಂತ್ರಕರು ಹಾಗೂ
ಸದಸ್ಯ ಕಾರ್ಯದರ್ಶಿ
ಪರೀಕ್ಷಾ ಪ್ರಾಧಿಕಾರ ಮಂಡಳಿ,
ಬೆಂಗಳೂರು.

**ಇವರಿಗೆ,**

ರಾಜ್ಯದ ಎಲ್ಲಾ 'ಡಿ' ಫಾರ್ಮ ವಿದ್ಯಾಸಂಸ್ಥೆಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ

*ಪ್ರತಿಯನ್ನು:-*

1) *ಮಾನ್ಯ ಆಯುಕ್ತರು, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.*
2) *ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.*
3) ಸಮಿತಿಯ ಎಲ್ಲಾ ಸದಸ್ಯರುಗಳಿಗೆ.